


# ಅತ್ಯಾಕರ್ಷಕ ಲ್ಯಾಂಡ್‌ಆರ್ಟ್!



ಗುಯಿಲಾಮ್ ಲೆಗ್ರೋಸ್

ಹೆಚ್ಚಿನ ಗ್ರಾಫಿಟಿ (ಗೀಚು ಬರಹ) ಕಲಾವಿದರು ದೈತ್ಯಾಕಾರದ ಮಾನವ ಚಿತ್ರಗಳನ್ನು ರಚಿಸುವುದೇ ಇಲ್ಲ ಅದರಲ್ಲೂ ಬೆಟ್ಟಗಳ ಮೇಲೆ ಕಲಾಕೃತಿಯನ್ನು ಚಿತ್ರಿಸುವುದೂ ಸಹ ಬಹಳ ವಿರಳ.

ಸೈಪ್ ಎಂದೇ ಪ್ರಸಿದ್ಧವಾಗಿರುವ ಸ್ವಿಸ್ ಕಲಾವಿದರಾದ ಗುಯಿಲಾಮ್ ಲೆಗ್ರೋಸ್ ಒಂದು ವರ್ಷದ ಪ್ರಯೋಗದ ನಂತರ ಸ್ವತಃ ತಾವೇ ಅಭಿವೃದ್ಧಿಪಡಿಸಿದ ವಿಶೇಷ ಜೈವಿಕ ವಿಘಟನೆಯ (ಬಯೋಡಿಗ್ರೇಡಬಲ್) ಬಣ್ಣವನ್ನು ಬಳಸಿ ಹುಲ್ಲಿನಲ್ಲಿ ತಾತ್ಕಾಲಿಕ ಚಿತ್ರಗಳನ್ನು ರಚಿಸುತ್ತಾರೆ. ಬಣ್ಣವನ್ನು ನೈಸರ್ಗಿಕ ವರ್ಣದ್ರವ್ಯಗಳೊಂದಿಗೆ ಬೆರೆಸಿದ ಲಿನ್ಸಿಡ್ ಎಣ್ಣೆ, ನೀರು ಮತ್ತು ಹಿಟ್ಟಿನಿಂದ ತಯಾರಿಸುತ್ತಾರೆ. ಬಣ್ಣವು ಕೇವಲ ಒಂದೆರಡು ವಾರಗಳು ಅಥವಾ ಒಂದು ತಿಂಗಳು ಮಾತ್ರ ಇರುತ್ತದೆ. ಆದರೆ ಮಳೆ ಬೀಳುವ ಪ್ರಮಾಣ ಮತ್ತು ಹುಲ್ಲು ಎಷ್ಟು ವೇಗವಾಗಿ ಬೆಳೆಯುತ್ತದೆ ಎಂಬ ಅಂಶಗಳನ್ನು ಅವಲಂಬಿಸಿ ಬೇಗನೇ ಮಸುಕಾಗುತ್ತದೆ. ಸ್ವಿಟ್ಜರ್‌ಲೆಂಡಿನ ಲೇಸಿನ್‌ನಲ್ಲಿರುವ ಹುಲ್ಲಿನ ಬೆಟ್ಟದ ತುದಿಯಲ್ಲಿ ಪೈಪ್ ಅನ್ನು ಸೇದುತ್ತಾ ದೂರಕ್ಕೆ ದೃಷ್ಟಿ ಹಾಯಿಸುತ್ತಿರುವ ವ್ಯಕ್ತಿಯನ್ನು ಚಿತ್ರಿಸುವ 'ಅನ್ ಗ್ರ್ಯಾಂಡ್ ಹೋಮ್' 2016 ರಲ್ಲಿ ರಚಿಸಿದ್ದರು. ಇದು 14,000 ಚದರ ಮೀಟರ್ ಅಳತೆಯದ್ದಾಗಿದ್ದು, ಗಾತ್ರದಲ್ಲಿ ವಿಶ್ವದಾಖಲೆಯನ್ನು ಮುರಿದಿದೆ.

ಅನೇಕ ಸಮಕಾಲೀನ ಕಲಾವಿದರಂತೆ ಗುಯಿಲಾಮ್ ಲೆಗ್ರೋಸ್ ರವರು ತಾವು ಮಾಡಬೇಕಾದ ವಿಷಯದ ಫೋಟೊಗ್ರಫಿಯೊಂದಿಗೆ ಪ್ರಾರಂಭಿಸುತ್ತಾರೆ ಮತ್ತು ತಂಡದೊಂದಿಗೆ ಕ್ಷೇತ್ರ ವಿಚಕ್ಷಣೆ ಮಾಡುತ್ತಾರೆ. ಶ್ರಮದಾಯಕ ನಿಖರತೆಯೊಂದಿಗೆ ಲೆಗ್ರೋಸ್ ಮತ್ತು ಅವರ ತಂಡವು ಗೂಟವನ್ನು ನೆಡುವುದರ ಮೂಲಕ ನೆಲದ ಮೇಲೆ ಗ್ರಿಡ್ ಅನ್ನು ತಯಾರಿಸಿಕೊಂಡು ಒಂದು ಸಮಯದಲ್ಲಿ ಒಂದು ಗ್ರಿಡ್ ಅನ್ನು ಪೇಂಟ್ ಮಾಡುತ್ತಾರೆ. ತಿದ್ದುಪಡಿಯ ಅಗತ್ಯವಿದೆಯೇ ಎಂಬುದನ್ನು ಡ್ರೋಣ್ ಕ್ಯಾಮೆರಾದಿಂದ ಪರಿಶೀಲನೆ ಮಾಡುತ್ತಾರಂತೆ. ಸರಾಸರಿ ಈ ಪ್ರಮಾಣದ ಭಾವಚಿತ್ರವನ್ನು ರಚಿಸಲು ಮೂರು ತಿಂಗಳು ಬೇಕಾಗುತ್ತದೆ. ಮತ್ತು 650 ಲೀಟರ್ ಬಣ್ಣ ಬೇಕಾಗುತ್ತದೆ. ಫ್ರಾನ್ಸ್‌ನ ಬೆಲ್ ಫೋರ್ಟ್‌ನಲ್ಲಿ ನಡೆದ ಯುರೋಕೆನ್ನಿಸ್ ಉತ್ಸವಕ್ಕಾಗಿ 2018ರಲ್ಲಿ ರಚಿಸಲಾದ 'ಪ್ರೆಸೆಂಟ್ ಬೈ ಫ್ಯೂಚರ್' ಗುಯಿಲಾಮ್ ಲೆಗ್ರೋಸ್‌ರವರ ಅತ್ಯಂತ ಸಂಕೀರ್ಣವಾದ ಚಿತ್ರಕಲಾಕೃತಿ.

■ ವಿದ್ಯಾ ವಿ. ಹಾಲಭಾವಿ